**O.S. 123-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ G A B, ವಕೀಲರಿಂದಃ**

3. ನಾನು ಗಂಡನ ಮನೆಯಲ್ಲಿ ಮನೆ ನಂಃ 501 ರಲ್ಲಿ ಇದ್ದೇನೆ. ಈರವ್ವ ದೇವಾಂಗಪೇಟದಲ್ಲಿ ಮನೆ ನಂಃ 399 ರಲ್ಲಿದ್ದಾಳೆ. ಈರವ್ವ ಹಾಗೂ ಗಂಗಾಧರಪ್ಪ ರವರ ಮದುವೆ 1979 ರಲ್ಲಿ ಆಗಿದೆ ಅಂದರೆ ಸರಿ. ಹುಬ್ಬಳ್ಳಿಯಲ್ಲಿರುವ ಹೊಲ - ಮನೆ ಪಿತ್ರಾರ್ಜಿತ ಆಸ್ತಿ. ಶಿಗ್ಗಿ ಗ್ರಾಮದಲ್ಲಿರುವ ಮನೆ ನಮ್ಮ ತಂದೆ ಖರೀದಿ ಮಾಡಿದ್ದು. ನಮ್ಮ ತಾಯಿ ಸರಸ್ವತಿ 1980 ರಲ್ಲಿ ಮರಣ ಹೊಂದಿದ್ದಾರೆ. ಹುಬ್ಬಳ್ಳಿಯಲ್ಲಿರುವ ಜಮೀನು 16 ಗುಂಟೆ 8 ಆಣೆ ರೇಲ್ವೆ ಇಲಾಖೆಗೆ ಸ್ವಾಧೀನ ಹೋದಾಗ ಪರಿಹಾರದ ಹಣ 68 ಲಕ್ಷ ರೂ. ಬಂದಿತ್ತು. 68 ಲಕ್ಷ ರೂ. ದಲ್ಲಿ ಎಲ್ಲರೂ ಸಮಪಾಲು ಹಂಚಿಕೊಂಡಿದ್ದೇವೆ. ಜ್ಯೋತಿಗೆ 5 – 6 ಲಕ್ಷ ರೂ. ಮಾತ್ರ ಪರಿಹಾರದ ಹಣದಲ್ಲಿ ಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ಕರ್ನಾಟಕ ಗ್ರಾಮೀಣ ಬ್ಯಾಂಕದಲ್ಲಿ ಜಂಟಿ ಖಾತೆ ಇತ್ತು. ಅತ್ತೆ - ಸೊಸೆ ಜಂಟಿ ಖಾತೆ ಇತ್ತು. ಜಂಟಿ ಖಾತೆಯಲ್ಲಿರುವ ಹಣವನ್ನು ಈರವ್ವ ತೆಗೆದುಕೊಳ್ಳುತ್ತಿದ್ದಳು. ಈರವ್ವ ಜ್ಯೋತಿಗೆ ಎಷ್ಟು ಹಣ ಕೊಟ್ಟಿದ್ದಳು ಅಂತಾ ಗೊತ್ತಿಲ್ಲ ಅಂದರೆ ಸರಿಯಲ್ಲ. ಈರವ್ವಳಿಗೆ ಅನುಕೂಲವಾಗಲು ಹಣ ಸಮಪಾಲು ತೆಗೆದುಕೊಂಡಿದ್ದೇವೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಜ್ಯೋತಿ ಗಂಡ ಸದಾನಂದ ಮರಣ ಹೊಂದುವ ಕಾಲಕ್ಕೆ ಎಲ್ ಐ ಸಿ ಪಾಲಿಸಿ ಹೊಂದಿದ್ದನು ಅಂದರೆ ಗೊತ್ತಿಲ್ಲ. ಪಾಲಸಿಯಲ್ಲಿ ನಾಮಿನಿ ಹೆಸರು ಈರವ್ವಳ ದು ಇತ್ತು ಅಂದರೆ ಸರಿ. ಎಲ್ ಐ ಸಿ ಪಾಲಿಸಿ ಹಣವನ್ನು ಈರವ್ವ ಒಬ್ಬಳೇ ತೆಗೆದುಕೊಂಡಿದ್ದಾಳೆ ಅಂದರೆ ಗೊತ್ತಿಲ್ಲ. ವಾರಸಾ ನಮೂದು ಮಾಡಲು ಜ್ಯೋತಿ ಸಹಿ ಕೇಳಿದ್ದೇವೆ ಅಂದರೆ ಸರಿ. ಜ್ಯೋತಿ ಕಾನೂನುಬದ್ಧವಾಗಿ ಬರಬೇಕಾದ ಎಲ್ ಐ ಸಿ ಪಾಲಿಸಿ, ಭೂ-ಸ್ವಾಧೀನದ ಪರಿಹಾರದ ಹಣ ಕೊಟ್ಟರೆ ಮಾತ್ರ ಸಹಿ ಮಾಡುತ್ತೇನೆ ಅಂತಾ ಹೇಳಿದ್ದಾಳೆ ಅಂದರೆ ಸರಿ. ಹಣವನ್ನು ಜ್ಯೋತಿಗೆ ಕೊಡಬಾರದು ಅಂತಾ ಈರವ್ವಳು ನನ್ನ ಮೂಲಕ ಈ ದಾವೆ ಸಲ್ಲಿಸಿದ್ದಾಳೆ ಅಂದರೆ ಸರಿಯಲ್ಲ. ಕಾನೂನುಬದ್ಧವಾಗಿ ಈರವ್ವಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಒಂದು ವರ್ಷದ ಹಿಂದೆ ನಾನು ವಾಟ್ನಿ ಕೇಳಿದ್ದೆನು. ನಾನು ಯಾವುದೇ ವಾಟ್ನಿ ಕೇಳಿಲ್ಲ, ಈರವ್ವಳ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ.

**O.S. 123-24** **PW : 1**

ಜ್ಯೋತಿ ಹಾಗೂ ಅವರ ಮಗನಿಗೆ ಹುಬ್ಬಳ್ಳಿಯಲ್ಲಿರುವ ಮನೆಯಲ್ಲಿರುತ್ತೇನೆ ಅಂತಾ ಹೇಳಿದರು ಸಹ ನಾವು ಮನೆಯಿಂದ ಹೊರಗೆ ಹಾಕಿದ್ದೇವೆ ಅಂದರೆ ಸರಿಯಲ್ಲ. ವಿನಾಕಾರಣ ದಾವೆ ಸಲ್ಲಿಸಿದ್ದರಿಂದ ಜ್ಯೋತಿಗೆ ಪರಿಹಾರ ಕೊಡಬೇಕಾಗುತ್ತದೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.